ನಾನಂತೂ ನಿಮ್ಮ ಋಣ ತೀರಿಸಲಾರೆ...'

ತಕ್ಷಣ ಆಕೆ ನನ್ನ ಬಾಯಿಯ ಮೇಲೆ ಕೈಯಿಟ್ಟು ಹೇಳಿದಳು – 'ಅದೆಂತಹ ಮಾತು ಅಂತ ಆಡ್ತಾ ಇದ್ದೀರಿ ಪಪ್ಪ... ನಿಮ್ಮಿಂದಾಗಿಯೇ ತಾನೆ ನಾನು ಬೆಳೆದು ದೊಡ್ಡವಳಾಗಿ ಈ ಸ್ಥಿತಿಗೆ ಬಂದಿರೋದು. ನೀವು ಖಂಡಿತಾ ಮಾಮೂಲಿಯಂತಾಗಿ. ನಾವು ಪಟೇಲ್ ನಗರದ ಮನೆಗೆ ನಾಳೆ ಹೋಗೋಣ. ನಾವೂ ನಿಮ್ಮ ಜೊತೆಯಲ್ಲಿಯೇ ಇರುತ್ತೇವೆ...'

ಆಕೆಯ ಕಣ್ಣಲ್ಲಿ ನೀರು ಜಿನುಗಿದ್ದನ್ನು ನಾನು ಗಮನಿಸಿದೆ.

***

ಗತ ದಿನಗಳ ಮೃದು, ಸಿಹಿ–ಕಹಿ ನೆನಪುಗಳು ವೃದ್ಧಾಪ್ಯದ ಒಂಟಿತನದಲ್ಲಿ ಮರುಕಳಿಸಿ ಜಾದುವಿನಂತೆ ಕಾಡುತ್ತಿವೆ ಎಂದು ಎಲ್ಲೋ ಓದಿದ ನೆನಪು. ಇಂದು ಇದೇ ನೆನಪುಗಳು ಕಾಡುತ್ತಿವೆ.

ಆದಿತ್ಯನ ವರ್ತನೆ ತುಂಬಾ ಬೇಸರ ತರಿಸಿತ್ತು. ತಾಯಿಯ ಅಂತಿಮ ಸಂಸ್ಕಾರಕ್ಕೂ ಆತ ಸರಿಯಾದ ಸಮಯಕ್ಕೆ ತಲುಪಿರಲಿಲ್ಲ. ಸುಷ್ಮಾಳ ಕುಟುಂಬದವರೇ ಎಲ್ಲಾ ಕಾರ್ಯಗಳನ್ನು ನಿರ್ವಹಿಸಿದ್ದರು. ನಾನು ನಿರ್ಜೀವ ಗೊಂಬೆಯಂತೆ ಕಣ್ಣು ಬಿಟ್ಟುಕೊಂಡು ಎಲ್ಲವನ್ನೂ ನೋಡುತ್ತಿದ್ದೆ. ಅಂದಿನಿಂದ ಇಂದಿನ ತವಕವೂ ಆದಿತ್ಯ ನನ್ನೊಂದಿಗೆ ಮಾತನಾಡಿಲ್ಲ. ನನ್ನ ತಪ್ಪು ಎಂದರೆ...? ಆತನ ವಿದ್ಯಾಭ್ಯಾಸಕ್ಕೆ ಅವನ ಅವಶ್ಯಕತೆಗಳಿಗೆ ನಾನೇನು ಕೊರತೆ ಮಾಡಿದ್ದೆನೇ...? ಆದಿತ್ಯನ ಕರ್ತವ್ಯವೇನೂ ಇಲ್ಲವೆ? ಸುಷ್ಮಾ ಮತ್ತು ಆದಿತ್ಯ ಇಬ್ಬರನ್ನು ರಿಪಬ್ಲಿಕ್ ಡೇ ಪರೇಡ್ ರಾಮಲೀಲಾ, ದೀಪಾವಳಿ ಜಾತ್ರೆ... ಹೀಗೆ ಸುತ್ತಾಡಿಸುತ್ತಾ ಅವರ ಎಲ್ಲ ಆಸೆಗಳನ್ನು ಪೂರೈಸಿಲ್ಲವೆ? ಹಾಂ, ಆತ ಅಮೆರಿಕಕ್ಕೆ ಹೋದ ಬಳಿಕ ನಾನು ಸ್ವಲ್ಪ ಕಠೋರನಾದೆ ಎಂದಷ್ಟೇ ಆತ ಇಷ್ಟೊಂದು ನಿಷ್ಠುರವಾಗಿ ನಮ್ಮ ಚಿಂತೆಯನ್ನೇ ಮಾಡಿದಿದ್ದರೆ ಹೇಗೆ? ಸಂಬಂಧ ಎಂದರೆ ಇಷ್ಟೇನಾ?

ಮಕ್ಕಳ ಬಾಲ್ಯದ ನೆನಪುಗಳಲ್ಲಿ ಕಳೆದು ಹೋದ ನನಗೆ ಅದ್ಯಾವುದೋ ಸ್ಥಿತಿಯಲ್ಲಿ ನನ್ನ ಬಾಲ್ಯದ ನೆನಪುಗಳು ನನ್ನನ್ನು ಆವರಿಸಿದವು.

ನಾನು ಜಬಲ್ಪುರದಲ್ಲಿ ಠಾಕೂರರ ಹಳ್ಳಿಯಾದ ದೀಕ್ಷಿತ್‌ಪುರದ ಜಮೀನ್ದಾರರ ಮೂವರು ಗಂಡು ಮಕ್ಕಳಲ್ಲಿ ಎರಡನೆಯವನು. ದೊಡ್ಡ ಕುಟುಂಬದಲ್ಲಿ ಹೆಚ್ಚಾಗಿ ಆಳುಗಳ ಆರೈಕೆಯಲ್ಲಿಯೇ ಬೆಳೆದವನು. ನನಗೆ ಚೆನ್ನಾಗಿ ನೆನಪಿದೆ. ಇಬ್ಬರು ಆಳುಗಳ ಮದುವೆ ಒಂದೇ ಕುಟುಂಬದ ಇಬ್ಬರು ಅಕ್ಕತಂಗಿಯರ ಜೊತೆ ನಡೆದಿತ್ತು. ದೊಡ್ಡವಳು ಇಮರತಿ, ಚಿಕ್ಕವಳು ಸುಕರತಿ. ನಾವು ಇವರ ಹೆಸರುಗಳನ್ನು ಗೇಲಿ ಮಾಡಿ ಕರೆಯುತ್ತಿದ್ದೆವು. ಸಮಯ ಕಳೆದಂತೆ ಇಮರತಿಗೆ ಮೂವರು ಗಂಡು ಮಕ್ಕಳಾದವು. ಸುಕರತಿಗೆ ಮೂವರೂ ಹೆಣ್ಣು ಮಕ್ಕಳು ಜನಿಸಿದವು. ಅಕ್ಕ ಇಮರತಿ ಸ್ವಭಾವತಃ ಗರ್ವಿಷ್ಠೆಯಾಗಿದ್ದರೆ ತಂಗಿ ಸುಕರತಿ ಅತ್ಯಂತ ಸಾಧು ಸ್ವಭಾವದವಳಾಗಿದ್ದಳು. ಸುಕರತಿ ನನ್ನ ತಾಯಿಯ ಸೇವೆಯನ್ನು ಚಾಚೂತಪ್ಪದೆ ಮಾಡುತ್ತ ಅಮ್ಮನ ಪ್ರೀತಿಪಾತ್ರಳಾಗಿದ್ದಳು.

ನನ್ನ ಶಾಲೆಯ ದಿನಗಳು ಕಳೆದು ಕಾಲೇಜು ಶಿಕ್ಷಣಕ್ಕಾಗಿ ಶಹರಕ್ಕೆ ಹೊರಟು ಬಂದ ಕಾರಣ ಹಳ್ಳಿಗೆ ಹೋಗುವುದು ಕಡಿಮೆಯಾಯಿತು. ಕಾಲೇಜು ಶಿಕ್ಷಣ ಮುಗಿದ ಕೂಡಲೇ ದಿಲ್ಲಿಯಲ್ಲಿ ನೌಕರಿ ದೊರೆಯಿತು. 'ದಿಲ್ಲಿಗೆ ಹೊರಡುವ ಮುನ್ನ ಮದುವೆ ಮಾಡಿಕೊಂಡು ಹೋಗು' ಎಂದು ಅಪ್ಪನ ಅಪ್ಪಣೆಯಾಯಿತು. ಅಪ್ಪನ ಮಾತು ಎಂದರೆ ಕಲ್ಲಿನ ಮೇಲೆ ಗೆರೆ ಕೊರೆದಂತೆ. ಸರಿ, ಮದುವೆಯ ತಯಾರಿಗಳು ನಡೆಯತೊಡಗಿದವು. ತಂಗಿ ಸುಕರತಿಯ ಕುಟುಂಬ ತಯಾರಿಯ ಎಲ್ಲ ಕೆಲಸಗಳಲ್ಲಿ ತೊಡಗಿಕೊಂಡರು. ಅಕ್ಕ ಇಮರತಿಯ ಗಂಡು ಮಕ್ಕಳು ಪರಸ್ಪರ ಜಗಳದಲ್ಲಿಯೇ ನಿರತರಾಗಿದ್ದರು. ಸುಕರತಿಯ ಹೆಣ್ಣು ಮಕ್ಕಳ ಹಾಡು, ನೃತ್ಯಗಳ ನಡುವೆ ನನ್ನ ಮದುವೆ ವಿಜೃಂಭಣೆಯಿಂದ ನಡೆದುಹೋಯಿತು. ಇಡೀ ಊರಿಗೆ ಅಪ್ಪ ಮದುವೆ ಊಟ ಹಾಕಿಸಿದರು. ಸುಕರತಿಯ ಕುಟುಂಬದ ವಿಶಿಷ್ಟ ಸ್ವಭಾವ ನನ್ನ ಹಳ್ಳಿಯ ನೆನಪಾಗಿ ಮನದಾಳದಲ್ಲಿ ಉಳಿದುಹೋಯಿತು.

ಮದುವೆಯ ನಂತರ ದಿಲ್ಲಿಗೆ ಬಂದು ನೆಲೆಸಿದ ಬಳಿಕ ದೀಕ್ಷಿತಪುರಕ್ಕೆ ಹೋಗುವುದು ನಿಂತೇಹೋಯಿತು ಎನ್ನಬಹುದು. ನಂತರ ಅಣ್ಣನ ಮೂಲಕ ತಿಳಿಯಿತು. ಇಮರತಿ ಮತ್ತು ಸುಕರತಿಯ ಗಂಡಂದಿರು ಒಂದು ವರ್ಷದ ಅಂತರದಲ್ಲಿ ತೀರಿಕೊಂಡರು. ಸುಕರತಿಯ ಇಬ್ಬರೂ ಹೆಣ್ಣು ಮಕ್ಕಳಿಗೆ ಮದುವೆಯಾಗಿ ಅವರು ಗಂಡನ ಮನೆಗೆ ಸೇರಿದ ಮೇಲೆ ಸುಕರತಿ ಒಂಟಿಯಾಗಿಬಿಟ್ಟಳು. ಸುಕರತಿಗೆ ಗಂಡು ಮಕ್ಕಳಿಲ್ಲದ ಕಾರಣ ಅವಳಿಗೆ ಆಸರೆ ಯಾರು? ಅವಳ ಅಂತಿಮ ಸಂಸ್ಕಾರ, ಶ್ರಾದ್ಧವನ್ನು ಮಾಡುವವರು ಯಾರು? ಎಂಬ ಪ್ರಶ್ನೆ ಕಾಡತೊಡಗಿತು. ಹಾಗೇನೆ ನಿರ್ಜೀವ ಶರೀರಕ್ಕೆ ವಾರಸುದಾರರು ಯಾರಾದರೇನು ಎಂಬ ವಿಚಾರವೂ ಸುಳಿದಾಡಿತು. ಅಂದಹಾಗೆ, ಅಮ್ಮ ತೀರಿಕೊಂಡಾಗ ಅಂತಿಮ ವಿಧಿಗೆ ಆದಿತ್ಯನಾದರೂ ಸರಿಯಾದ ಸಮಯಕ್ಕೆ ಬಂದಿದ್ದನೇ? ಆದಿತ್ಯ ಹುಟ್ಟಿದ ಮೇಲೆ ವೃದ್ಧಾವಸ್ಥೆಗೆ ಆಸರೆ ಸಿಕ್ಕಂತಾಯಿತು ಎಂದುಕೊಂಡಿದ್ದೆ. ಆದರೆ ಇಂದು ಮಗಳು ಗಂಡನ ಮನೆಯ ಆಸ್ತಿಯಾಗಬೇಕಾದವಳು ನನಗೆ ಆಸರೆಯಾಗಿದ್ದಾಳೆ. ಈ ಹೊರೆಯಿಂದ ನನಗೆ ಮುಕ್ತಿ ಸಿಗುವುದಿಲ್ಲ.

***

'ಪಪ್ಪ, ಇವತ್ತು ನೀವು ಗೆಲುವಾಗಿದ್ದೀರಲ್ಲ...?'

ನಾನು ಹೊರಳಿ ನೋಡಿದೆ. ಓಹ್ ರೋಹಿತ್!

ಆತ ನನ್ನ ತಲೆಯ ಬಳಿ ಕುಳಿತು ನನ್ನ ಕೈಯನ್ನು ಮೆಲ್ಲನೆ ಅದುಮಿದ್ದ.

'ಮಗು, ನನ್ನಿಂದಾಗಿ ನಿನಗೆ ತುಂಬಾ ಕಷ್ಟವಾಗುತ್ತಿದೆ. ಆಫೀಸ್‌ಗೂ ತುಂಬಾ ರಜೆ ಹಾಕಿದ್ದೀಯಾ. ನಾನು... ನಿಮ್ಮೆಲ್ಲರಿಗೆ ತುಂಬಾ ಭಾರವಾಗಿದ್ದೇನೆ ಅನ್ನಿಸುತ್ತೆ...' ಆತನ ಕೈಹಿಡಿದು ಹೇಳಿದ್ದೆ.

ಆತ ಕೂಡಲೆ ನನ್ನ ತುಟಿಯ ಮೇಲೆ ಕೈಇಟ್ಟು ಹೇಳಿದ – 'ನೋ ನೆಗೆಟಿವ್ ಟಾಕ್ಸ್ ನೌ ಪಪ್ಪ, ನೀವು ಈಗ ಮನೆಗೆ ಹೋಗುತ್ತೀರಿ. ನಿಮ್ಮ ಸ್ನೇಹಿತರು ಅಲ್ಲಿ ನಿಮ್ಮೊಂದಿಗೆ ಇಸ್ಪೀಟ್ ಆಡಲು ಕಾಯುತ್ತಿದ್ದಾರೆ. ನಿಮ್ಮ ಕೇರ್ ತೆಗೆದುಕೊಳ್ಳಲು ನಾನು, ಸುಷ್ಮಾ ಇದ್ದೇವೆ. ಚಿಂತೆ ಬಿಡಿ. ಟುಮಾರೊ ಈಸ್ ಯುವರ್ಸ್... ನಾನು ಡಿಸ್‌ಚಾರ್ಜ್ ಪೇಪರ್ಸ್ ತಯಾರು ಮಾಡಲು ಹೇಳುತ್ತೇನೆ.'

***

ರೋಹಿತ್ ತೆರಳಿದ ಬಳಿಕ ನಾನು ಮತ್ತೊಮ್ಮೆ ಗತನೆನಪಿನ ಲೋಕಕ್ಕೆ ಜಾರಿದೆ. ಅವಳು ತೀರಿಕೊಂಡಾಗ ತಡವಾಗಿ ಬಂದಿದ್ದ ಆದಿತ್ಯ ಹೇಳಿದ– 'ಪಪ್ಪ, ಆದದ್ದು ಆಗಿ ಹೋಯಿತು. ನಿಮ್ಮ ಸಿಟ್ಟು, ಸೆಡವು ಎಲ್ಲವನ್ನೂ ಬದಿಗೊತ್ತಿ ಅಮೆರಿಕಕ್ಕೆ ಬನ್ನಿ. ನಾನು ಎಲ್ಲ ವ್ಯವಸ್ಥೆ ಮಾಡುತ್ತೇನೆ.'

ನಿದ್ರೆಯ ಮಂಪರಿನ ಹೊಯ್ದಾಟದಲ್ಲಿ ನಾನು ಎಲ್ಲಿದ್ದೇನೆ, ಏನಾಗಿದ್ದೇನೆ... ಎಂಬುದು



ತಿಳಿಯದಾಯಿತು. ನಿಜವಾಗಿಯೂ ನಾನು ವಿಮಾನದಲ್ಲಿ ಆಕಾಶದೆತ್ತರದಲ್ಲಿ ಹಾರುತ್ತಿದ್ದೇನೆ ಎನಿಸಿತು. ಒಂದು ಅನಿಶ್ಚಿತ ಗಂತವ್ಯದ ಕಡೆಗೆ ಹೋಗುತ್ತಿದ್ದೇನೆ. ಅಲ್ಲ, ನನಗಾಗಿ ಎಲ್ಲರೂ ಬಿಟ್ಟ ಕಣ್ಣು ಬಿಟ್ಟ ಹಾಗೆ ಉದ್ವಿಗ್ನತೆಯಿಂದ ಕಾಯುತ್ತಿದ್ದಾರೆ.

ನನ್ನ ತಾಯಿ, ತಂದೆ, ಪತ್ನಿ, ಇಮರತಿ, ಸುಕರತಿ, ಅಸಂಖ್ಯ ಆಳುಗಳು, ಸುಷ್ಮಾ, ರೋಹಿತ್ ಮುಂತಾದವರು... ಆದರೆ ನನ್ನ ಕಣ್ಣುಗಳು ಮಾತ್ರ ಆದಿತ್ಯನನ್ನು ಹುಡುಕುತ್ತಿದ್ದವು.

ಪ್ರತಿಕ್ರಿಯಿಸಿ: feedback@sudha.co.in